

ಆನೆಯನ್ನು ಹೇಗೆ ಬಣ್ಣಿಸುವುದು? ಉಹುಂ, ಆನೆಯನ್ನು ಬಣ್ಣಿಸಲಾಗದು. ಆನೆ ಎನ್ನುವುದೊಂದು ಅಚ್ಚರಿ ಹಾಗೂ ಅದೊಂದು ಅನುಭವ. ಆ ಕಾರಣದಿಂದಲೇ ಆನೆಯನ್ನು ಬಣ್ಣಿಸುವ ಎಲ್ಲ ಪ್ರಯತ್ನಗಳೂ ಕುರುಡರು ಆನೆ ಮುಟ್ಟಿದ ಕಥೆಯನ್ನೇ ನೆನಪಿಸುವುದು.

ಭಾರತೀಯರ ಪಾಲಿಗಂತೂ ಆನೆ ಒಂದು ಅದ್ಭುತ ಸಸ್ತನಿ ಮಾತ್ರವಲ್ಲ, ಅದು ನಮ್ಮ ಪುರಾಣ–ಸಂಸ್ಕೃತಿ ಕಥನಗಳೊಳಗೆ ಹಾಸುಹೊಕ್ಕಾಗಿರುವ ರೂಪಕ. ಆನೆಯ ಜೊತೆಗೆ ಗಣಪತಿಯೂ ನೆನಪಾಗುತ್ತಾನೆ, ಗಜಚರ್ಮ ಉಟ್ಟಿರುವ ಶಿವನೂ ನೆನಪಾಗುತ್ತಾನೆ, ಇಂದ್ರನ ಐರಾವತದ ಚಿತ್ರವೂ ನೆನಪಿಗೆ ಬರುತ್ತದೆ. ಇವೆಲ್ಲದರ ಜೊತೆಗೆ ಆನೆಯಂಥ ಆನೆಯನ್ನೂ ಹೊಡೆದುರುಳಿಸುವ ವೀರಪ್ಪನ್‌ನಂತಹ ಚೋರರೂ ನೆನಪಾಗುತ್ತಾರೆ. ಈ ಬಹುರೂಪದಿಂದಲೇ ಇರಬೇಕು, ಆನೆಯೆಂದರೆ ಮಕ್ಕಳಿಗೆ ಅಚ್ಚುಮೆಚ್ಚು. ಆನೆಯ ಚಿತ್ರವನ್ನು ಗೆರೆಗಳಲ್ಲಿ ಮೂಡಿಸುವುದು ಮಕ್ಕಳ ಚಿತ್ರಾಭ್ಯಾಸದ ಪ್ರಾರಂಭಿಕ ಪುಟಗಳಲ್ಲೊಂದು.

ಊರುಕೇರಿಯ ಜಾಡುಗಳು ಕಾಡಿನೊಳಗೂ ಮೂಡುತ್ತಿರುವ ಸಂದರ್ಭದಲ್ಲಿ ಆನೆಗಳ ಅಸ್ತಿತ್ವಕ್ಕೆ ಧಕ್ಕೆ ಒದಗಿರುವುದು, ಕಾಡಂಚಿನ ಗದ್ದೆಗಳಲ್ಲಿ ಆನೆಗಳ ಹೆಜ್ಜೆಗಳು ಅಲ್ಲೋಲ ಕಲ್ಲೋಲ ಉಂಟುಮಾಡುವುದು – ಇವೆಲ್ಲ ಆಧುನಿಕ ಜೀವನದ ಭಾಗವೇ ಆಗಿಬಿಟ್ಟಿವೆ. ನೀರು–ಆಹಾರ ಹುಡುಕಿಕೊಂಡು ಆನೆಗಳು ಊರಿನ ದಾರಿ ಹಿಡಿದು ಜನರನ್ನು ಭಯಭೀತಗೊಳಿಸುವುದೂ ಇದೆ. ಮನುಷ್ಯ–ಆನೆಗಳ ಈ ಸಂಘರ್ಷ ಕರ್ನಾಟಕಕ್ಕೆ ಸೀಮಿತವಾದ ವಿದ್ಯಮಾನವೇನೂ ಅಲ್ಲ. ಆನೆಗಳಿರುವ ಎಲ್ಲ ದೇಶಗಳಲ್ಲೂ ಇಂಥ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ.

ಆನೆಗಳ ಪ್ರಮುಖ ನೆಲೆಗಳಲ್ಲಿ ಇಂಡೋನೇಷ್ಯಾ ಕೂಡ ಒಂದು. ಅಲ್ಲಿನ ಅಚ್ಚೆ ಬೆಸರ್ ಪ್ರಾಂತ್ಯದ (**Aceh Besar Regency**) ಸ್ಯಾರಿ (**Saree**) ಎನ್ನುವ ಪ್ರದೇಶದಲ್ಲಿ ಆನೆಗಳ ತರಬೇತಿ ಕೇಂದ್ರವೊಂದಿದೆ. ಆ ‘ಆನೆಶಾಲೆ’ಯಲ್ಲಿ ಆನೆಗಳ ಬದುಕನ್ನು ಹತ್ತಿರದಿಂದ ನೋಡಬಹುದು. ಆನೆಗಳ ಊಟ–ಪಾಠ, ಚಿನ್ನಾಟವನ್ನು ಕಣ್ತುಂಬಿಕೊಳ್ಳಬಹುದು. ಹೊಸ ಆನೆಗಳನ್ನು ಪಳಗಿಸುವ, ಗಾಯಗೊಂಡ ಆನೆಗಳಿಗೆ ಆರೈಕೆ ನೀಡುವ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ. ಪ್ರಸ್ತುತ ಬರಹದೊಂದಿಗಿನ ಛಾಯಾಚಿತ್ರಗಳೇ ‘ಆನೆ ಕೇಂದ್ರ’ದ ಸೊಬಗು–ಸಮೃದ್ಧಿಯನ್ನು ಸೂಚಿಸುವಂತಿವೆ.

ಒಂದು ಕಾಲದಲ್ಲಿ ಸ್ಯಾರಿ ಪ್ರದೇಶದ ಪರಿಸರ ಆನೆಗಳ ಪುಂಡಾಟಕ್ಕೆ ಪ್ರಸಿದ್ಧವಾಗಿತ್ತು. ಸ್ಥಳೀಯರ ಬೆವರುಂಡ ಬೆಳೆ ಆನೆಗಳಿಗೆ ಬಲಿಯಾಗುತ್ತಿತ್ತು. ಆನೆ–ಮಾನವ ಸಂಘರ್ಷದ ಪ್ರಕರಣಗಳಿಗೆ ಕೊನೆಹಾಡುವ ಉದ್ದೇಶದಿಂದ ಅಲ್ಲಿ ಆನೆಗಳ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರ ಶುರುವಾದ ನಂತರ ಸ್ಥಳೀಯ ಕೃಷಿ ಆನೆಗಳ ಆತಂಕದಿಂದ ಹೆಚ್ಚೂಕಡಿಮೆ ಮುಕ್ತವಾಗಿದೆ. ಅಷ್ಟು ಮಾತ್ರವಲ್ಲ, ಸ್ಥಳೀಯರು ಆನೆಗಳ ಬಗ್ಗೆ ಸ್ನೇಹಭಾವನೆ ಬೆಳೆಸಿಕೊಂಡಿದ್ದಾರೆ. ಆನೆಗಳ ಸಂರಕ್ಷಣೆಯ ದೃಷ್ಟಿಯಿಂದ ಕೂಡ ಈ ‘ಆನೆ ಕೇಂದ್ರ’ ಪ್ರಮುಖ ಪಾತ್ರ ವಹಿಸಿದೆ.

ಆನೆಗಳ ಲೋಕದಲ್ಲಿ ಸುಮಾತ್ರಾದ ಆನೆಗಳಿಗೆ ವಿಶೇಷ ಸ್ಥಾನವಿದೆ. ಉಳಿದ ಆನೆಗಳಿಗೆ ಹೋಲಿಸಿದರೆ ಗಾತ್ರದಲ್ಲಿ ಚಿಕ್ಕದಾಗಿರುವ ಅವು ಸಂಖ್ಯೆಯಲ್ಲಿ ಕೂಡ ಹೆಚ್ಚೇನಿಲ್ಲ. ಅಚ್ಚೆ ಬೆಸರ್ ಪರಿಸರದಲ್ಲಿ ಸುಮಾರು 500 ಸುಮಾತ್ರ ಆನೆಗಳಿರಬಹುದೆಂದು ಇಂಡೋನೇಷ್ಯಾದ ಪರಿಸರ ಸಚಿವಾಲಯ ಅಂದಾಜು ಮಾಡಿದೆ.

ಚಿತ್ರಗಳು: ಎಎಫ್‌ಪಿ